

## ದೇವರ ಪಲ್ಲಕ್ಕಿ

ದೇವರ ಪಲ್ಲಕ್ಕಿಯಲ್ಲಿ ದೇವತಾ ಮೂರ್ತಿಗಳನ್ನಿಟ್ಟು, ಜೊತೆಗೆ ಶರಣರ, ಶಿವಯೋಗಿಗಳ ಭಾವಚಿತ್ರಗಳನ್ನಿರಿಸಿ ಇಬ್ಬರು ಅದನ್ನು ಹೊತ್ತುಕೊಂಡು ಬಾಜಾ ಭಜಂತ್ರಿಯೊಂದಿಗೆ ಸುಮಂಗಲಿಯರ ಕಳಸಾರತಿಯೊಂದಿಗೆ ಊರ ತುಂಬಾ ಮೆರವಣಿಗೆ ಮಾಡುತ್ತಾರೆ. ಕಟ್ಟಿಗೆಯಿಂದ ಕಲಾತ್ಮಕವಾಗಿ ತಯಾರಿಸಿದ ಈ ಪಲ್ಲಕ್ಕಿಯನ್ನು ದೇವರ ರಥೋತ್ಸವದ ಸಮಯದಲ್ಲಿ ಬಳಸಲಾಗುತ್ತದೆ. ಹಿಂದೆ ಸಂತ–ಮಹಾತ್ಮರ ಉತ್ಸವದ ಕಾಲದಲ್ಲಿ ಇದೇ ರೀತಿಯ ಪಲ್ಲಕ್ಕಿಗಳನ್ನು ಬಳಸುತ್ತಿದ್ದರು. ಇಂತಹ ದೇವರ ಪಲ್ಲಕ್ಕಿಗಳನ್ನು ಹಿರೇಸಿಂಗನಗುತ್ತಿಯ ಹನುಮಂತಪ್ಪ ಬಡಿಗೇರ ಇವರು ಒಂದು ತಿಂಗಳಲ್ಲಿ ತಯಾರಿಸಿ ಕೊಡುತ್ತಾರೆ. ಪೂಜ್ಯತೆಗೆ ಪಾತ್ರವಾದ ದೇವರ ಪಲ್ಲಕ್ಕಿಯ ಉತ್ಸವವನ್ನು ನೋಡಿದಾಗ ಮನ ಪರಿಶುದ್ಧಗೊಂಡು ಭಾವದಲ್ಲಿ ಭಕ್ತಿ ಮೂಡುತ್ತದೆ.

**■ ಬಸವರಾಜ ಹೂಗಾರ, ಇಲಕಲ್ಲ**

## ಅಯ್ಯೋ ಓಪನ್ ಮಾಡಕ್ಕಾಗಲಿಲ್ಲ!

ದೇವರಾಯನ ದುರ್ಗದಲ್ಲಿ ರಸ್ತೆ ಬದಿಯ ಅಂಗಡಿಯೊಂದಕ್ಕೆ ನುಗ್ಗಿದ ಕೋತಿ ಕೈಗೆ ಸಿಕ್ಕಿದ ಸ್ಪ್ರೈಟ್ ಬಾಟಲಿಯನ್ನೆತ್ತಿಕೊಂಡು ಅಲ್ಲೇ ಇದ್ದ ಪಾರ್ಕಿಗೆ ಓಡಿತ್ತು. ಪಾರ್ಕಿನ ಕಲ್ಲು ಕಂಬವೊಂದರ ಮೇಲೆ ಕುಳಿತುಕೊಂಡು ಕೈಯಿಂದ ಸ್ಪ್ರೇಟ್ ಅನ್ನು ತೆರೆಯಲು ಪ್ರಯತ್ನಿಸಿತು. ಹಿಂದೆ–ಮುಂದೆ–ಮೇಲೆ–ಕೆಳಗೆ ಎಲ್ಲಾ ರೀತಿಯಲ್ಲೂ ಅದನ್ನು ತಿರುಗಿಸುತ್ತಾ ತಲೆ ಕೆರೆದುಕೊಳ್ಳುತ್ತಿತ್ತು. ಅಯ್ಯೋ... ಇದನ್ನು ಓಪನ್ ಮಾಡಕ್ಕಾಗಲಿಲ್ಲ ಎಂದು ಗೊತ್ತಾಗಿ ಕೊನೆಗೆ ಅದನ್ನು ಎಸೆಯಿತು.

**■ ಶಶಿರೇಖಾ ನಾಗೇಂದ್ರ, ತುಮಕೂರು**





## ‘ದರ್ಪಣ ಸುಂದರಿ’

ಬೇಲೂರಿನ ವಿಶೇಷ ಆಕರ್ಷಣೆ ಎಂದರೆ, ಅದು ವಿಶ್ವಮಟ್ಟದಲ್ಲಿ ಹೆಸರು ಮಾಡಿರುವ ‘ದರ್ಪಣ ಸುಂದರಿ’ (**Beauty and Mirror**). ವಲ್ಲರಿಯೋಪಾದಿಯ ಪ್ರಭಾವಳಿ, ಆಕರ್ಷಣೀಯ ತುರುಬು, ಹಣೆಗೆ ಚಾಚಿಕೊಂಡಿರುವ ಕೇಶರಾಶಿ, ಎದೆಯ ಸಹಜ ಆಕರ್ಷಣೆ, ‘ಸಿಂಹಕಟಿ’, ಬಾಳೆಯ ದಿಂಡಿನಂಥ ಕೋಮಲ ಕಾಲುಗಳು, ಪಾದದ ಮೇಲೆ ಅಂದಿಗೆ, ಗೆಜ್ಜೆಸರ, ಕಂಠಾಭರಣಗಳು, ತೋಳ್ಬಂದಿ, ಕೈ ಬಳೆಗಳು, ಉಂಗುರಗಳು, ಸೊಂಟಪಟ್ಟಿ, ದೇಹಪೂರಾ ಮುಚ್ಚಿರುವ ವಿವಿಧ ಆಭರಣಗಳು. ವರ್ಣನೆಗೆ ಸಿಲುಕದ ಶಿಲ್ಪ. 38 ‘ಮದನಿಕೆಯರ’ ಅಥವಾ ‘ಶಿಲಾ ಬಾಲಕಿಯರ’ ಸಮೂಹ ಶಿಲ್ಪಗಳು ವಿಷ್ಣುವರ್ಧನನ ದರ್ಬಾರ್ ಹಾಲ್‌ನ ಕಂಭಗಳಲ್ಲಿ ಕಾಣಬಹುದಾಗಿದೆ. ರಸಿಕತೆಗೆ ಉನ್ಮಾದ ತರುವ 11ನೇ ಶತಮಾನದ ಶಿಲ್ಪಿ ಜಕಣಾಚಾರಿಯವರ ಮಹೋನ್ನತ ‘ಶಿಲ್ಪರಾಶಿ’ಗೆ ತಲೆಬಾಗಲೇಬೇಕು.

**■ ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ**